# 4:4 ಗೃಹ ನಿರ್ಮಾಣಕ್ಕಾಗಿ ಬ್ಯಾಂಕಿನಿಂದ ನೇರ ಸಾಲ

| ಕ್ರ.ಸಂ | ವಿಷಯ | ನಿಯಮಗಳು |
|---|---|---|
| 1. | ಉದ್ದೇಶಗಳು (Purpose) | ಕೆಳಕಂಡ ಉದ್ದೇಶಗಳಿಗೆ ಗೃಹ ನಿರ್ಮಾಣ ಸಾಲವನ್ನು ಮಂಜೂರು ಮಾಡಲಾಗುತ್ತದೆ.<br>1. ನಿವೇಶನ ಖರೀದಿಸಿ ವಾಸದ ಮನೆ ನಿರ್ಮಿಸಲು.<br>2. ವಾಸದ ಮನೆ/ಪ್ಲಾಟ್ ಖರೀದಿಸಲು.<br>3. ಸ್ವಂತ ನಿವೇಶನದಲ್ಲಿ ವಾಸದ ಮನೆ ನಿರ್ಮಿಸಲು.<br>4. ಈಗಾಗಲೇ ನಿರ್ಮಿಸಿರುವ ವಾಸದ ಮನೆಯನ್ನು ವಿಸ್ತರಣೆ ಮಾಡಲು.<br>5. ವಾಸದ ಮನೆ ರಿಪೇರಿಗಾಗಿ/ ನವೀಕರಣಕ್ಕಾಗಿ. |
| 2 | ಅರ್ಹತೆ (Eligibility) | 1. ಬ್ಯಾಂಕಿನ ಎಲ್ಲಾ ಗ್ರಾಹಕರು ಸಾಲ ಪಡೆಯಲು ಅರ್ಹರಿರುತ್ತಾರೆ. ಗ್ರಾಹಕರು ಎಂದರೆ ಮೈಸೂರು ಮತ್ತು ಚಾಮರಾಜ ಜಿಲ್ಲೆಗಳಲ್ಲಿನ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಾಸಮಾಡುವ ವ್ಯವಸಾಯಗಾರರು, ವೃತ್ತಿಪರರು, ವ್ಯಾಪಾರಸ್ತರು, ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಸ್ವಂತ ಉದ್ಯೋಗಸ್ಥರು.<br>2. ಅರ್ಜಿದಾರರು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ಪಟ್ಟಣ ಪಂಚಾಯಿತಿ ಪುರಸಭೆ, ನಗರಸಭೆ, ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಾಸವಾಗಿರಬೇಕು.<br>3. ಅರ್ಜಿದಾರರು ಸ್ವಂತ ಹೆಸರಿನಲ್ಲಿ/ಗಂಡ ಮತ್ತು ಹೆಂಡತಿ ಇಬ್ಬರ ಹೆಸರಿನಲ್ಲಿ ಅಥವಾ ಜಂಟಿ ಹೆಸರಿನಲ್ಲಿ ನಿವೇಶನ ಹೊಂದಿದ್ದಲ್ಲಿ ಸಾಲ ಪಡೆಯಲು ಅರ್ಹರಾಗಿರುತ್ತಾರೆ<br>4. ಅರ್ಜಿದಾರರು ನೌಕರರಾಗಿದ್ದಲ್ಲಿ ಕನಿಷ್ಠ 5 ವರ್ಷಗಳ ಉಳಿಕೆ ಸೇವಾವಧಿ ಹೊಂದಿರುವ ಸರ್ಕಾರಿ, ಅರೆ ಸರ್ಕಾರಿ, ಬ್ಯಾಂಕ್ ನೌಕರರ ಹಾಗೂ ಅನುಧಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದು ಶೇಕಡ 50 ಕಿಂತ ಅಧಿಕ ನಿವ್ವಳ ವೇತನ ಪಡೆಯುತ್ತಿರುವ ನೌಕರರು ಅರ್ಹರಾಗಿರುತ್ತಾರೆ. ನೌಕರರು ತಮ್ಮ ಮೇಲಾಧಿಕಾರಿಗಳಿಂದ ಆಕ್ಷೇಪಣೆ ಇಲ್ಲದ ಪತ್ರ (NOC) ಹಾಗೂ ಸಂಬಳ ಬಟವಾಡೆ ಅಧಿಕಾರಿಗಳಿಂದ ನೌಕರರ ವೇತನದಿಂದ ಸಾಲ ತೀರುವಳಿ ಮಾಡುವ ಬಗ್ಗೆ ನಿಯಮಾನುಸಾರ ಒಪ್ಪಂದ ಪತ್ರ ಪಡೆದು ಸಲ್ಲಿಸಬೇಕಾಗುತ್ತದೆ.<br>5. ವ್ಯವಸಾಯಗಾರರಿಗೆ ಹಾಗೂ ಇತರರಿಗೆ ಅವರ ವೃತ್ತಿ ಆದಾಯದ ಜೊತೆ ಇತರೆ ಆದಾಯ ಅಂದರೆ ಬಾಡಿಗೆ ಆದಾಯ ಇತ್ಯಾದಿಗಳನ್ನು ಪರಿಗಣಿಸಲಾಗುವುದು.<br>6. ಗೃಹ ಸಾಲ ಅರ್ಜಿದಾರರು ಕನಿಷ್ಠ 21 ವರ್ಷಗಳ ಹಾಗೂ ಗರಿಷ್ಟ 65 ವರ್ಷಗಳ ವಯೋಮಿತಿ ಹೊಂದಿರಬೇಕು.<br>7. ಸರ್ಕಾರದ ಅನುದಾನಿತ ಯೋಜನೆಗಳನ್ವಯ ಶಿಫಾರಸ್ಸು ಮಾಡಿದ ಫಲಾನುಭವಿಗಳು ಸಾಲ ಪಡೆಯಲು ಅರ್ಹರಾಗಿರುತ್ತಾರೆ.<br>8. ಅರ್ಜಿದಾರರು ಹಾಗೂ ಜಾಮೀನುದಾರರು ಬ್ಯಾಂಕಿನ ನಾಮ ಮಾತ್ರ ಸದಸ್ಯತ್ವ ಹೊಂದಿರಬೇಕು.<br>9. ಮನೆ/ ಪ್ಲಾಟ್‌ಗಳ ಖರೀದಿಗಾಗಿ ಸಾಲವನ್ನು ಅಪೇಕ್ಷಿಸಿದ್ದಲ್ಲಿ ಖರೀದಿಸಲಾಗುವ ಮನೆ/ ಪ್ಲಾಟ್, 15 ವರ್ಷಕ್ಕಿಂತ ಹಿಂದೆ ನಿರ್ಮಿತವಾಗಿರಕೊಡದು. |
| 3. | ಸಾಲ ಮಂಜೂರಾತಿಯ ಗರಿಷ್ಟ ಮಿತಿ | 1. ಮನೆ ನಿರ್ಮಿಸಲು/ ಪ್ಲಾಟ್ ಅಥವಾ ಮನೆ ಖರೀದಿಸಲು ವಾರ್ಷಿಕ ಆದಾಯದ 5 ಪಟ್ಟು ಗರಿಷ್ಠಸಾಲ. ರೂ. 25,00,000/- (ಇಪ್ಪತ್ತೈದು ಲಕ್ಷಗಳು) ಅಥವಾ ಕಟ್ಟಡದ ಅಂದಾಜು ವೆಚ್ಚದ/ ಮೌಲ್ಯದ ಶೇಕಡ 75ರಷ್ಟು ಇವೆರಡರಲ್ಲಿ ಯಾವುದು ಕಡಿಮೆಯೊ ಅದು. ನಿವೇಶನ ಖರೀದಿಗೆ ಸಾಲವನ್ನು ನೀಡುವ ಸಂದರ್ಭದಲ್ಲಿ ಉಪನೋಂದಣಾಧಿಕಾರಿಯಿಂದ ನಿಗಧಿ ಪಡಿಸುವ ನಿವೇಶನದ ಮೌಲ್ಯವನ್ನು ಪರಿಗಣಿಸಬೇಕು ಹಾಗೂ ಮನೆ/ ಪ್ಲಾಟ್ ನಿರ್ಮಸಲು/ ಖರೀದಿಸಲು ಸಾಲ ನೀಡುವಾಗ ನೊಂದಾಯಿತ |

| | | |
|---|---|---|
| | | ಮೌಲ್ಯಮಾಪಕರು ನೀಡುವ ಮೌಲ್ಯವನ್ನು ಪರಿಗಣಿಸತಕ್ಕದು.<br>2. ಈಗಾಗಲೇ ನಿರ್ಮಿಸಿರುವ ಮನೆಯನ್ನು ವಿಸ್ತರಣೆಮಾಡಲು ಗರಿಷ್ಠ ಸಾಲ ರೂ.10,00,000/-.(ಹತ್ತು ಲಕ್ಷಗಳು) ಅಥವಾ ಕಟ್ಟಡದ ಅಂದಾಜು ಮೌಲ್ಯದ ಶೇಕಡ 75 ರಷ್ಟ ಇವೆರಡರಲ್ಲಿ ಯಾವುದು ಕಡಿಮೆಯೋ ಅದು.<br>3. ಮನೆ ರಿಪೇರಿಗಾಗಿ/ ನವೀಕರಣಕ್ಕಾಗಿ ಗರಿಷ್ಠ ಸಾಲ ರೂ.5,00,000/-(ಐದು ಲಕ್ಷ) ಅಥವಾ ಅಂದಾಜು ಮೌಲ್ಯದ ಶೇಕಡ 75 ರಷ್ಟ ಇವೆರಡರಲ್ಲಿ ಯಾವುದು ಕಡಿಮೆಯೋ ಅದು.<br>4. ನೌಕರರಾಗಿದ್ದಲ್ಲಿ ಸಾಲದ ಮಿತಿಯನ್ನು ನಿರ್ಧರಿಸುವಾಗ ಅರ್ಜಿದಾರರು ಪಡೆಯುವ ನಿವ್ವಳ ವೇತನ/ ಆದಾಯ/ ಮರುಪಾವತಿಯ ಸಾಮರ್ಥ್ಯವನ್ನು ಹಾಗೂ ವಯೋಮಿತಿಯನ್ನು ಗಣನೆಗೆ ತೆಗೆದು ಕೊಳ್ಳಲಾಗುವುದು. ಶೇಕಡ 50 ರಷ್ಟು ಮಾಹೆಯಾನ ನಿವ್ವಳ ವೇತನ /ಆದಾಯವನ್ನು ಮಾಹೆಯಾನ್ ಸಾಲದ ಕಂತಿನ ಪಾವತಿಗಾಗಿ ಗಣನೆಗೆ ತೆಗೆದು ಕೊಳ್ಳಲಾಗುವುದು. |
| 4. | ಮಾರ್ಜಿನ್ (Margin) | ಅಂದಾಜು ವೆಚ್ಚದ/ ಮೌಲ್ಯದ ಶೇಕಡ 25 ರಷ್ಟ ಮಾರ್ಜಿನ್ ಹಣವನ್ನು ಸಾಲಗಾರರು ಭರಿಸಬೇಕು. |
| 5. | ಬಡ್ಡಿ ದರ (Interest rate) | 1. ಬ್ಯಾಂಕಿನ ಸಾಲದ ಉಪಸಮಿತಿ ಸಭೆಯ ನಿರ್ಣಯ ದಂತೆ ಕಾಲಕಾಲಕ್ಕೆ ಬದಲಾಗುವ ಬಡ್ಡಿ ದರವನ್ನು ಪಾವತಿಸಲು ಸಾಲಗಾರರು ಬದ್ಧರಾಗಿರಬೇಕು.<br>2. ಸುಸ್ತಿ ಸಾಲದ ಮೊಬಲಗಿನ ಮೇಲೆ ಶೇ.2 ರಷ್ಟು ದಂಡ ಬಡ್ಡಿಯನ್ನು ವಿಧಿಸಲಾಗುವುದು.<br>3. ಕಟ್ಟಡ ನಿರ್ಮಾಣದ ಅವಧಿಯಲ್ಲಿ ಸಾಲದ ಮೊದಲನೇ ಕಂತಿನ ಹಣ ಬಿಡುಗಡೆಯಾದ ದಿನಾಂಕದಿಂದ ಬಡ್ಡಿಯನ್ನು ಪ್ರತಿ ತಿಂಗಳಿಗೊಮ್ಮೆ ವಿಧಿಸಲಾಗುವುದು. |
| 6 | ಸಾಲದ ವಿಧ (type of facility) | ಗೃಹ ಸಾಲಗಳನ್ನು 'ಟರ್ಮ್ ಲೋನ್' ಎಂಬ ಹೆಸರಿನಲ್ಲಿ ಕೊಡಲಾಗುವುದು. |
| 7. | ಸಾಲಕ್ಕೆ ಭದ್ರತೆ (security) | ಸಾಲ ಪಡೆಯಲು ಸ್ಥಿರಸ್ವತ್ತನ್ನು ಬ್ಯಾಂಕಿಗೆ ನ್ಯಾಯಸಮ್ಮತ ಅಡಮಾನ. ಎಲ್ಲಾ ಮೂಲ ದಾಖಲಾತಿಗಳನ್ನು ಒಳಗೊಂಡಂತೆ ಮಾಡಿಕೊಡಬೇಕು. ಸಾಲಕ್ಕೆ ಅಡಮಾನ ಮಾಡುವ ಅಸ್ತಿಯ ಬಗ್ಗೆ ಖರೀಧಿ ಪತ್ರ ಹಾಗೂ ಟೈಟಲ್ ಡೀಡ್ ಮತ್ತು ಇತರೆ ದಾಖಲಾತಿಗಳನ್ನು ಸಾಲಗಾರರ ಹೆಸರಿನಲ್ಲಿ ಲಭ್ಯವಿದ್ದಲ್ಲಿ ಕ್ರಯಪತ್ರ ಹಾಗೂ ಇತರ ಮೂಲ ದಾಖಲಾತಿಗಳನ್ನು ಬ್ಯಾಂಕಿನ ನೊಂದಾಯಿತ ಅಧಾರ ಪತ್ರ ಮಾಡಿಸಿಕೊಳ್ಳತ್ತಕ್ಕದ್ದು. |
| 8 | ಸಾಲದ ನಿರ್ವಹಣ ವೆಚ್ಚ (processing fee) | 1. ಮಂಜೂರಾದ ಸಾಲದ ಮಿತಿಯ ಶೇಕಡ 0.50 % ಅಥವ ಗರಿಷ್ಠ ರೂ.10,000/-.<br>2. ಸಾಲಕ್ಕೆ ಅರ್ಜಿಯನ್ನು ಬ್ಯಾಂಕಿಗೆ ಸಲ್ಲಿಸುವಾಗ ಈ ವೆಚ್ಚವನು ಬ್ಯಾಂಕಿಗೆ ಕಟ್ಟಬೇಕು.<br>3. ಈ ಹಣವನ್ನು ಬ್ಯಾಂಕಿನ "ಸಂಡ್ರಿಡೆಪಾಸಿಟ್" ಠೇವಣಿ ಖಾತೆಯಲ್ಲಿ ಇಡಬೇಕು.<br>4. ಸಾಲವನ್ನು ಮಂಜೂರು ಮಾಡಿದ ನಂತರ ಹಾಗೂ ಮೊದಲನೆ ಕಂತನು ಬಿಡುಗಡೆಮಾಡಿದ ನಂತರ ಈ ಹಣವನ್ನು ಶಾಖೆಯ ಕಮಿಷನ್ ಖಾತೆಗೆ ಜಮ ಮಾಡಬೇಕು.<br>5. ಆರ್ಜಿದಾರರು ಮಂಜೂರಾದ ಸಾಲವನ್ನು ಬಿಡುಗಡೆ ಮಾಡಿಸಿಕೊಳದೇ ಇದ್ದಲ್ಲಿ, ಶೇಕಡ 50 ಭಾಗ ಹಣವನ್ನು ಹಿಂತಿರುಗಿಸಿ ಉಳಿದ 50 ಭಾಗವನ್ನು ಶಾಖೆಯ ಕಮಿಷನ್ ಖಾತೆಗೆ ಜಮ ಮಾಡಬೇಕು. |
| 9 | ವಿಮೆ (Insurance) | 1. ಬ್ಯಾಂಕಿನ ಗೃಹ ಸಾಲದ ಯೋಜನೆ ಅಡಿ ನಿರ್ಮಿಸಿದ ಮನೆಯನ್ನು ವಿಮೆಮಾಡಿಸಬೇಕು. ವಿಮೆಮಾಡಿಸುವಾಗ ಮನೆಯ ಮಾರ್ಕೆಟ್‌ದರ ಅಥವಾ ಬಾಕಿಯಿರುವ ಸಾಲ ಯಾವುದು ಹೆಚ್ಚು ಆ ಮೊತ್ತದ ಮೇಲೆ ವಿಮೆಮಾಡಿಸಬೇಕು<br>2. ವಿಮೆಮಾಡಿದ ಯೋಜನೆಯಲ್ಲಿ ಸಾಲಗಾರರ ಜೀವದ ರಿಸ್ಕನ್ನು ಕವರ್ ಮಾಡಬೇಕು<br>3. ವಿಮೆಯ ಪಾಲಿಸಿಯಲ್ಲಿ ಬ್ಯಾಂಕಿನ ಹೆಸರು ನಮೂದಿಸಿರಬೇಕು. |

<table>
<tr><td></td><td></td><td colspan="3">4. ವಿಮಾಪಾಲಿಸಿಯ ಸಾಲದ ಪ್ರಸ್ತಾವಗಳ ಜೊತೆ ಇರಬೇಕು.<br>5. ವಿಮಾ ಪಾಲಿಸಿಯನ್ನು ಸಾಲದ ಪೂರ್ಣ ಅವಧಿಯವರೆಗೆ ತೆಗೆದುಕೊಳ್ಳಬೇಕು.<br>6. ವಿಮೆ ಪ್ರೀಮಿಯಂ ಮೊತ್ತವನ್ನು ಸಾಲದ ಮೊತ್ತದಲ್ಲಿ ಸೇರಿಸಿ ಒಟ್ಟು ಮೊತ್ತಕ್ಕೆ ಕಂತನ್ನು ನಿಗಧಿಮಾಡಬೇಕು.<br>7. ವಿಮಾ ಪಾಲಿಸಿಯನ್ನು ಬ್ಯಾಂಕಿನ ಕಾರ್ಪೋರೇಟ್ ಏಜೆಂಟ್ಸ್‌ಗಳ ಮುಖಾಂತರ ಮಾಡಿಸುವುದು.</td></tr>
<tr><td>10.</td><td>ಸಾಲವನ್ನು ಮಂಜೂರು ಮಾಡುವುದು (sanction of loan)</td><td colspan="3">ಸಾಲವನ್ನು ಬ್ಯಾಂಕಿನ ಕೇಂದ್ರ ಕಛೇರಿಯ ಸಾಲದ ಉಪಸಮಿತಿಗೆ ಕಳುಹಿಸುವುದು.</td></tr>
<tr><td rowspan="15">11.</td><td rowspan="15">ಸಾಲ ಬಿಡುಗಡೆ ವಿಧಾನ (Disbursement of loan)</td><td colspan="3">1. ಹೊಸಮನೆ ನಿರ್ಮಿಸಲು/ಮನೆ ವಿಸ್ತರಿಸಲು ಮಂಜೂರು ಮಾಡಿದ ಸಾಲದ ಮೊಬಲಗನ್ನು 5 ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು</td></tr>
<tr><td>ಕ್ರ.ಸಂ</td><td>ಕೆಲಸದ ವಿವರ</td><td>ಬಿಡುಗಡೆ ಮಾಡಬಹುದಾದ ಸಾಲದ ಪ್ರಮಾಣ</td></tr>
<tr><td>1.</td><td>ಬೇಸ್‌ಮೆಂಟ್ ಮುಗಿದ ನಂತರ</td><td>ಮಂಜೂರಾದ ಸಾಲದ 15 ಭಾಗ</td></tr>
<tr><td>2.</td><td>ಲಿಂಟಲ್ ಹಂತ ಮುಗಿದ ನಂತರ</td><td>ಮಂಜೂರಾದ ಸಾಲದ 25 ಭಾಗ</td></tr>
<tr><td>3.</td><td>ರೂಫ್ ಕೆಲಸ ಮುಗಿದ ನಂತರ</td><td>ಮಂಜೂರಾದ ಸಾಲದ 25 ಭಾಗ</td></tr>
<tr><td>4.</td><td>ಪ್ಲಾಸ್ಟಿಂಗ್,ಎಲೆಕ್ಟ್ರಿಸಿಟಿ,ಸ್ಯಾನಿಟರಿ,ಪ್ಲಂಬಿಂಗ್, ಫ್ಲೋರಿಂಗ್ ಹಾಗೂ ಇತರಕೆಲಸಗಳು.</td><td>ಮಂಜೂರಾದ ಸಾಲದ 25 ಭಾಗ</td></tr>
<tr><td>5.</td><td>ಕಟಡ ಕೆಲಸ ಪೂರ್ಣಗೊಂಡು ಬಗ್ಗೆ ವರದಿ ಸಲ್ಲಿಸಿದ ನಂತರ.</td><td>ಮಂಜೂರಾದ ಸಾಲದ 10 ಭಾಗ</td></tr>
<tr><td colspan="3">2. ಮನೆ ರಿಪೇರಿ/ ನವೀಕರಣಕ್ಕಾಗಿ ಮಂಜೂರಾದ ಸಾಲದ ಮೊಬಲಗನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಬಹುದು.</td></tr>
<tr><td>ಕ್ರ.ಸಂ</td><td>ಕೆಲಸದ ವಿವರ</td><td>ಬಿಡುಗಡೆ ಮಾಡಬಹುದಾದ ಸಾಲದ ಪ್ರಮಾಣ</td></tr>
<tr><td>1.</td><td>ರಿಪೇರಿ ಹಾಗೂ ನವೀಕರಣದ ಕಾಮಗಾರಿ ಶೇ.20 ಪೂರ್ಣಗೊಂಡ ನಂತರ.</td><td>ಮಂಜೂರಾದ ಸಾಲದ ಶೇಕಡ 60 ರಷ್ಟು</td></tr>
<tr><td>2.</td><td>ರಿಪೇರಿ ಹಾಗೂ ನವೀಕರಣದ ಕಾಮಗಾರಿ ಮುಗಿದ ನಂತರ.</td><td>ಮಂಜೂರಾದ ಸಾಲದ ಶೇಕಡ 40 ರಷ್ಟು</td></tr>
<tr><td colspan="3">1. ಪ್ರತಿ ಭಾರಿಯೂ ಸಾಲಗಾರನು ಕಂತಿನ ಸಾಲ ಬಿಡುಗಡೆ ಮಾಡಿಕೊಡುವಂತೆ ಲಿಖಿತ ಅರ್ಜಿ ಮೂಲಕ ಕೋರ ಬೇಕಾಗುತ್ತದೆ. ಕಂತಿನ ಸಾಲದ ಮೊಬಲಗನ್ನು ಸದ್ಬಳಕೆ ಮಾಡಿಕೊಂಡಿರುವುದಕ್ಕೆ ಬ್ಯಾಂಕಿನಿಂದ ನಿಯೋಜಿಸಲಾದ ಅಭಿಯಂತರರಿಂದ/ ಅಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಮತ್ತು ಅರ್ಜಿದಾರರು ತಮ್ಮ ಕುಟುಂಬ ವರ್ಗದವರೊಡನೆ ಪ್ರತಿ ಹಂತದಲ್ಲು ಕಟ್ಟಡ ಕೆಲಸದ ಬಳಿ ಭಾವ ಚಿತ್ರವನ್ನು ತೆಗೆಸಿಕೊಂಡು ಅರ್ಜಿಯ ಜೊತೆಲಗತ್ತಿಸಿ ಶಾಖಾ ವ್ಯವಸ್ಥಾಪಕರ ಮೂಲಕ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದು.<br>2. ನಿವೇಶನ, ಮನೆ/ ಪ್ಲಾಟ್ ಖರೀಧಿಸಿದಲ್ಲಿ ಸಾಲದ ಮೊಬಲಗನ್ನು ನೇರವಾಗಿ ನೊಂದಣಿ ಸಮಯದಲ್ಲಿ ಡಿ.ಡಿ. ಮೂಲಕ ಮಾರಾಟಗಾರರಿಗೆ ನೀಡಲಾಗುವುದು.</td></tr>
<tr><td>12</td><td>ಸಾಲದ ಮರುಪಾವತಿ (Repayment of loan)</td><td colspan="3">1. ಸಾಲದ ಮರುಪಾವತಿ ಅವಧಿಯನ್ನು ಅರ್ಜಿದಾರರ ವಯಸ್ಸಿನ ಅಧಾರದ ಮೇಲೆ ನಿರ್ಧರಿಸಲಾಗುವುದು. ಸಾಲದ ಮರುಪಾವತಿಯ ಅವಧಿಯು 25 ರಿಂದ 30 ವರ್ಷಗಳು. ಇದರಲ್ಲಿ "ಮಾರಟೋರಿಯಂ" ಅವಧಿ ಗರಿಷ್ಠ 18 ತಿಂಗಳು ಸೇರಿರುತ್ತದೆ.<br>2. ಅದಾಗ್ಯು, ಸಾಲಗಾರರು 70 ವರ್ಷ ವಯಸ್ಸು ತುಂಬುವುದರೊಳಗಾಗಿ ಸಾಲವು ಸಂಪೂರ್ಣವಾಗಿ ಮರಪಾವತಿಯಾಗಬೇಕು.<br>3. ಅರ್ಜಿದಾರರ ಜೊತೆ ಅವರ ಗಂಡ ಅಥವಾ ಹೆಂಡತಿ/ ಮಕ್ಕಳು ಸಹ-ಸಾಲಗಾರರಾಗಿದ್ದಲ್ಲಿ –ಅವರ ಅದಾಯವನ್ನು ಸಾಲದ ಮಿತಿ ನಿರ್ಧಿರಿಸಲು ಹಾಗೂ ಸಾಲದ ಮರುಪಾವತಿಯ ಅವಧಿಯನ್ನು ನಿಗಧಿ ಪಡಿಸಬಹುದು.</td></tr>
</table>

| | | |
|---|---|---|
| | | 4. ಸಾಮಾನ್ಯವಾಗಿ ಸಾಲದ ಮರುಪಾವತಿಯು ಮಂಜೂರಾದ ಸಾಲವು ಬಿಡುಗಡೆಯಾದ ನಂತರದ ತಿಂಗಳಿನಲ್ಲಿ ಪ್ರಾರಂಭವಾಗಬೇಕು.<br>5. ಅರ್ಜಿದಾರರು ವ್ಯವಸಾಯಗಾರರಾಗಿದ್ದಲ್ಲಿ ಸಾಲದ ಮರುಪಾವತಿಯನ್ನು ಅವರ ಆದಾಯಗಳಿಕೆಗೆ ಅನುಗುಣವಾಗಿ ನಿರ್ಧರಿಸಲಾಗುವುದು.<br>6. ಸಾಮಾನ್ಯವಾಗಿ ಸಾಲದ ಮರುಪಾವತಿಯು ಸಾಲಬಿಡುಗಡೆಯಾದ 18 ತಿಂಗಳ ನಂತರ ಅಥವಾ ಸಂಪೂರ್ಣ ಸಾಲ ಬಿಡುಗಡೆಯಾದ ದಿನದಿಂದ ಒಂದು ತಿಂಗಳಲ್ಲಿ ಪ್ರಾರಂಭವಾಗಬೇಕು.<br>7. ಸಾಲದ ಮರುಪಾವತಿಯನ್ನು ಕ್ಯಾಷ ಕಟ್ಟುವುದು/ ಸಾಲಗಾರನ ಖಾತೆಗಳಿಂದ ವರ್ಗಾವಣೆ/ ಪೋಸ್ಟ್‌ಡೇಟೆಡ್ ಚೆಕ್‌ಗಳ ಮುಖಾಂತರ ಮಾಡಬಹುದು. |
| 13 | ಮಾರಿಟೋರಿಯಂ ಅವಧಿಯಲ್ಲಿ ಬಡ್ಡಿ ಮರುಪಾವತಿ ಮಾಡುವ ಬಗ್ಗೆ (Repayment of interest during Moratorium period) | 1. ಪ್ರತಿ ಮಾಹೆ ಸಾಲದ ಖಾತೆಗೆ ಬಡ್ಡಿಯನ್ನು ಖರ್ಚಹಾಕಿದ ಕೂಡಲೆ ವಸೂಲಿ ಮಾಡಬೇಕು.<br>2. ಆದಾಗ್ಯೂ ಅರ್ಜಿದಾರರ ನಿರ್ಧಿಷ್ಟ ಮನವಿಯ ಮೇರೆಗೆ ಮಾರಿಟೋರಿಯಂ ಅವಧಿಯಲ್ಲಿ ಖರ್ಚಹಾಕಿದ ಬಡ್ಡಿಯನ್ನು ಸಾಲದ ಅಸಲಿಗೆ ಸೇರಿಸಿ ಸಾಲದ ಕಂತುಗಳನ್ನು ನಿಗಧಿ ಮಾಡಬಹುದು. ಇದಕ್ಕೆ ಕೇಂದ್ರ ಕಛೇರಿಯ ಅನುಮತಿ ಪಡೆಯಬೇಕು.<br>3. ಬಡ್ಡಿಯ ದರಗಳು ಏರಿಕೆಯಾದರೆ/ ರಿವೈಸ್ ಆದರೆ, ಅಂತಹ ಸನ್ನಿವೇಶದಲ್ಲಿ (EMI) ನವೀಕರಿಸಿ, ನವೀಕರಿಸಿದ ಸಾಲದ ಕಂತುಗಳನ್ನು ಸಾಲಗಾರರ ಗಮನಕ್ಕೆ ತರಬೇಕು ಹಾಗೂ ಲಿಖಿತ ಸಮ್ಮತಿಯನ್ನು ಪಡೆಯಬೇಕು. |
| 14 | ಗೃಹ ಸಾಲಗಳಿಗೆ ಪಡೆಯಬೇಕಾದ ದಾಖಲಾತಿಗಳು.(Documents to be obtained for housing loans) | ಅರ್ಜಿದಾರರು ಗೃಹ ಸಾಲಗಳನ್ನು ಪಡೆಯಲು ಈ ಕೆಳಕಂಡ ದಾಖಲಾತಿಗಳನ್ನು ಸಂಭಂದಪಟ್ಟ ಶಾಖೆಯ ಮುಖಾಂತರ ಸಲ್ಲಿಸತಕ್ಕದು.<br>1. ಸಾಲಕ್ಕೆ ಅರ್ಜಿ–ನಿಗಧಿತ ನಮೂನೆಯಲ್ಲಿ ಭರ್ತಿಮಾಡಿದ ಅರ್ಜಿಯಲ್ಲಿ ತಮ್ಮ ಹಾಗೂ ಜಾಮೀನುದಾರರ ಇತ್ತೀಚಿನ ಭಾವಚಿತ್ರವನ್ನು ಲಗತ್ತಿಸಿ ಸ್ವಯಂ ದೃಢೀಕರಿಸಿ ಸಲ್ಲಿಸತ್ತಕ್ಕದು.<br>2. ಮಾರಾಟ ಒಪ್ಪಂದ ಪತ್ರ.<br>3. ಮಂಜೂರಾತಿ ಪತ್ರ.<br>4. ಸ್ವಾಧೀನ ಪತ್ರ.<br>5. ಖಾತಾ ವರ್ಗಾವಣೆ ಪತ್ರ.<br>6. ಕಂದಾಯ ಕಟ್ಟಿದ ರಸೀದಿ–ಚಾಲ್ತಿ ವರ್ಷಕ್ಕೆ /ತಹಲ್ವರೆವೆಗೆ.<br>7. ಟೈಟಲ್ ಪತ್ರ /ಕ್ರಯ ಪತ್ರ/ವಿಲ್/ಗ್ರ್ಯಾಂಟ್ ಸರ್ಟಿಫಿಕೇಟ್/ವಿಭಾಗ ಪತ್ರ ಇತ್ಯಾದಿ.<br>8. ಪರವಾನಗೆ (ಲೈಸನ್ಸ್), ಅನುಮೋದಿಸಿದ ನಕ್ಷೆ, ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ .<br>9. ಋಣಭಾರ ರಹಿತ ಪ್ರಮಾಣ ಪತ್ರ 13 ವರ್ಷಕೆ. (EC)<br>10. ಕಟ್ಟಡ ನಿರ್ಮಾಣದ ಅಂದಾಜು ವೆಚ್ಚ ಹಾಗೂ ಅಧಿಕೃತ ಅಧಿಕಾರಿಗಳಿಂದ ಅನುಮೋದಿಸಿದ ನಕ್ಷೆ.<br>11. ಅಧಿಕೃತ ಅಧಿಕಾರಿಗಳಿಂದ ಸ್ವತ್ತಿನ ಮೌಲ್ಯ ನಿರ್ಧರಣಾ ಪ್ರಮಾಣ ಪತ್ರ.<br>12. ಅಧಿಕೃತ ಅಧಿಕಾರಿಗಳಿಂದ ಕೊಡಲ್ಪಟ ಆದಾಯ ಪ್ರಮಾಣ ಪತ್ರ (ವೇತನದಾರಗಿದ್ದಲ್ಲಿ ವೇತನ ಪ್ರಮಾಣ ಪತ್ರ ಹಾಗೂ ವೇತನಾಧಿಕಾರಿಗಳಿಂದ ಸಾಲದ ಕಂತು ಕಡಿತಗೊಳಿಸುವ ಬಗ್ಗೆ ಒಪ್ಪಿಗೆ ಪತ್ರ).<br>13. ವೃತ್ತಿಪರರು, ವ್ಯಾಪಾರಸ್ತರು ಹಾಗೂ ಸ್ವಂತ ಉದ್ಯೋಗಸ್ತರು ಆದಾಯ ತೆರಿಗೆ ಪಾವತಿದಾರರಾಗಿದ್ದರೆ, ಆದಾಯ ತೆರಿಗೆ ಪಾವತಿ |

| | | |
|---|---|---|
| | | ಮಾಡಿರುವುದಕ್ಕೆ ಎರಡು ವರ್ಷದ ದಾಖಲಾತಿ ಸಲ್ಲಿಸಬೇಕು.<br>14. ಸಾಲ ಮಂಜೂರಾತಿಗೆ ಮೊದಲು ಸಾಲದ ಅರ್ಜಿಯನ್ನು ಹಾಗೂ ಸಲ್ಲಿಸುವ ದಾಖಲಾತಿಗಳನ್ನು ಬ್ಯಾಂಕಿನ ನ್ಯಾಯವಾದಿಗಳಿಗೆ ಕಳುಹಿಸಿ ದಾಖಲಾತಿಗಳು ಸಾಲಕ್ಕೆ ಸಮಂಜಸ/ ಕ್ರಮಬದ್ಧವಾಗಿರುವ ಬಗ್ಗೆ ಕಾನುನು ಸಲಹೆ ಪಡೆಯತಕ್ಕದ್ದು.<br>15. ಖರೀದಿಸುವ ಸ್ಥಿರಾಸ್ತಿಗೆ ಸಂಬಂಧಿಸಿದಂತೆ ಮಾರಾಟ ಕರಾರು ಪತ್ರದಲ್ಲಿ ಸ್ಥಿರಾಸ್ತಿಗೆ ಸಂಬಂಧಿಸಿದ ಎಲ್ಲಾ ಅಸಲು ಪ್ರತಿಗಳನ್ನು ಹೊಂದಿರುವ ಬಗ್ಗೆ ದೃಢೀಕರಿಸತಕ್ಕದ್ದು.<br>16. ಗೃಹ ನಿರ್ಮಾಣ ಸಂಘದಿಂದ ನಿವೇಶನ ಮಂಜೂರಾಗಿದ್ದರೆ ಸಂಘಕ್ಕೆ ಯಾವುದೆ ಬಾಕಿ ಇಲ್ಲದಿರುವುದರ ಬಗ್ಗೆ ದೃಢೀಕರಣ ಪಡೆಯುವುದು. |
| 15. | ವಾಯಿದೆಯನಂತರ ಕಟ್ಟಿದ ಕಂತುಗಳು (Delayed payment of EMI) | ವಾಯಿದೆಯ ನಂತರ ತಡವಾಗಿ ಸಾಲದ ಕಂತುಗಳನ್ನು ಕಟ್ಟಿದ್ದರೆ ಅಂತ ಸಂದರ್ಭದಲ್ಲಿ ನಿಯಮಿತ ಕಂತುಗಳನ್ನು ವಸುಲಾತಿಮಾಡುವುದರ ಜೊತೆಗೆ ಸುಸ್ತಿಯ ಅವಧಿಗೆ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ವಸೂಲು ಮಾಡುವುದು. |
| 16. | ದಸ್ತಾವೇಜುಗಳು (Documents) | ಗೃಹ ಸಾಲಗಳಿಗೆ ಪಡೆದ ದಾಖಲಾತಿಗಳ ಜೊತೆಗೆ ಈ ಕೆಳಕಂಡ ದಸ್ತಾವೇಜುಗಳನ್ನು ಪಡೆಯಬೇಕು.<br>1. ಮನೆ ಸಾಲದ ಅರ್ಜಿ, ಸಂದರ್ಶನ, ಮೌಲ್ಯ ಮಾಪನ ಮತ್ತು ಪ್ರಸ್ತಾವನೆ (MCDCCB-0026)<br>2. ಸಾಲ ಮಂಜೂರಾತಿಯ ಕರಾರುಗಳು ಹಾಗೂ ನಿಬಂಧನೆಗಳು. (MCDCCB-0027)<br>3. ಸಾರ್ವಜನಿಕರಿಗೆ ಕೊಡುವ ಗೃಹ ಸಾಲಗಳಿಗೆ ಮಾಡಿಕೊಳ್ಳುವ ಸಾಲಗಳ ಜ್ಞಾಪಕ ಪತ್ರದ ಒಪ್ಪಂದ (Memorandum of Term Loan Agreement for Housing Loan Granted To Public). (MCDCCB-0031)<br>4. ರಿಜಿಸ್ಟರ್ಡ್ ಮಾರ್ಟ್‌ಗೇಜ್ ಡೀಡ್– (ನಿವೇಶನ, ಮನೆ, ಕಟ್ಟಡ ನಿರ್ಮಾಣ ಹಾಗೂ ವಾಣಿಜ್ಯ ಸಂಕಿರಣ). (MCDCCB-0029) |
| 17. | ಇತರೆ ನಿಯಮಗಳು (other rulers) | 1. ಮನೆ/ ಪ್ಲಾಟ್ ಖರೀಧಿಗೆ ಮಂಜೂರಾದ ಸಾಲದ ಮೊಬಲಗನ್ನು ಖರೀಧಿಸಿದ ಸ್ವತ್ತಿನ ನೊಂದಣಿ ಸಂದರ್ಭದಲ್ಲಿ ಮಾರಾಟಗಾರನ ಹೆಸರಿಗೆ ಪ್ರಾಪ್ತಿಕರ್ತನಿಗೆ ಮಾತ್ರ (ಅಕೌಂಟ್ ಪೇಯಿ ಓನ್ಲಿ) ಎಂದು ಕ್ರಾಸ್ ಮಾಡಿದ ಡಿಮಾಂಡ್ ಡ್ರಾಫ್ಟ್ ಮೂಲಕ ಪಾವತಿಸತಕ್ಕದ್ದು.<br>2. ನೊಂದಣಿಯಾದ ದಿನಾಂಕದಂದೆ ಹಾಗೂ 30 ದಿವಸದೊಳಗಾಗಿ ಸಾಲಗಾರನ ಹೆಸರಿಗೆ ನೊಂದಾವಣೆಯಾದ ಬಗ್ಗೆ ಹಕ್ಕು ಪತ್ರ, ಖಾತಾ ವರ್ಗಾವಣೆ ಪತ್ರ ಹಾಗೂ ಋಣಭಾರ ರಹಿತ ಪ್ರಮಾಣ ಪತ್ರವನ್ನು ಬ್ಯಾಂಕಿಗೆ ಸಲ್ಲಿಸತಕ್ಕದು. ತಪ್ಪಿದ್ದಲ್ಲಿ ಸಂಪೂರ್ಣ ಸಾಲವನ್ನು ಕಾನೂನು ರೀತ್ಯಾ ವಾಪಾಸ್ ಪಡೆಯುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.<br>3. ಸಾಲದ ಹಣದ ಡಿಮಾಂಡ್ ಡ್ರಾಫ್ಟ್‌ನ್ನು ಮಾರಾಟಗಾರರಿಗೆ ಕೊಡುವ ಸಂದರ್ಭದಲ್ಲಿ ಸದರಿ ಅಸ್ತಿಯ ಎಲ್ಲಾ ಮೂಲ ದಾಖಲಾತಿಗಳನ್ನು (ಅಸಲು ಪ್ರತಿಗಳನ್ನು) ಪಡೆಯತಕ್ಕದ್ದು. |
| 18 | ಬಡ್ಡಿ ದರ (Rate of Interest) | ಬಡ್ಡಿಯ ದರವು ಸರ್ಕಾರ/ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ/ನಬಾರ್ಡ/ಅಪೆಕ್ಸ್ ಬ್ಯಾಂಕ್ ಹಾಗೂ ಕೇಂದ್ರ ಕಛೇರಿಯ ಆದೇಶದಂತೆ ಇರುತ್ತದೆ. ಈ ಸಾಲಗಳಿಗೆ ತಿಂಗಳಿಗೊಮ್ಮೆ ಬಡ್ಡಿಯನ್ನು ವಿಧಿಸಬೇಕು. |
| 19 | ಉತ್ಪನ ಕೋಡ್ | TL- (H) |